9.1.1. ನಿಮ್ಮ ಕಲಿಕಾ ಮೇಜಿನ ಮೇಲಿರುವ ಮೇಜುದೀಪ(table lamp) ದ ಸ್ಥಾನವನ್ನು ಇನ್ನೊಬ್ಬ ವ್ಯಕ್ತಿಗೆ ನೀವು ಹೇಗೆ ವಿವರಿಸುವಿರಿ?

1. ಮೇಜಿನ ಅಂಚಿನಿಂದ 1 ಅಡಿ ದೂರದಲ್ಲಿ ಅದರ ಅಗಲದ ಬದಿಯಲ್ಲಿ ಒಂದು ಗುರುತು ಮಾಡಿ. (A)
2. ಅಲ್ಲಿಂದ ಲಂಬವಾಗಿ ಮೇಜಿನ ಉದ್ದಕ್ಕೆ ಸಮಾಂತರವಾಗಿ ಒಂದು ರೇಖೆ ಎಳೆಯಿರಿ. (AO)
3. ಮೇಜಿನ ಅಂಚಿನಿಂದ 2 ಅಡಿ ದೂರದಲ್ಲಿ ಅದರ ಉದ್ದದ ಬದಿಯಲ್ಲಿ ಒಂದು ಗುರುತು ಮಾಡಿ(B)
4. ಅಲ್ಲಿಂದ ಲಂಬವಾಗಿ ಮೇಜಿನ ಅಗಲಕ್ಕೆ ಸಮಾಂತರವಾಗಿ ಒಂದು ರೇಖೆ ಎಳೆಯಿರಿ. (BO)

ಹಂತ 2 ಮತ್ತು 4 ರಲ್ಲಿ ಎಳೆದ ರೇಖೆಗಳನ್ನು ಕಡಿಯುವ ಸ್ಥಳವೇ (O) ಮೇಜುದೀಪ ಇರುವ ಜಾಗ
ಈ ಜಾಗವನ್ನು (1,2) ಎಂದು ಸೂಚಿಸಬಹುದು




A Project of www.eShale

9.1.2. ರಸ್ತೆ ಯೋಜನೆ: ನಗರದ ಮಧ್ಯಭಾಗದಲ್ಲಿ ಒಂದನ್ನೊಂದು ಅಡ್ಡ ಹಾದುಹೋಗುವಂತೆ ಒಂದು ನಗರದಲ್ಲಿ ಎರಡು ಮುಖ್ಯರಸ್ತೆಗಳಿವೆ. ಈ ಎರಡು ರಸ್ತೆಗಳೂ ಒಂದು ಉತ್ತರ - ದಕ್ಷಿಣ ದಿಕ್ಕಿನಲ್ಲೂ ಇನ್ನೊಂದು ಪೂರ್ವ - ಪಶ್ಚಿಮ ದಿಕ್ಕಿನಲ್ಲೂ ಇವೆ. ಪರಸ್ಪರ 200m ಅಂತರದಲ್ಲಿರುವ ಇತರ ನಗರದ ಎಲ್ಲಾ ರಸ್ತೆಗಳೂ ಈ ರಸ್ತೆಗಳಿಗೆ ಸಮಾಂತರವಾಗಿವೆ. ಪ್ರತಿಯೊಂದು ದಿಕ್ಕಿನಲ್ಲೂ 5 ರಸ್ತೆಗಳಿವೆ.200m = 1cm ಎಂಬ ಪ್ರಮಾಣವನ್ನು ಉಪಯೋಗಿಸಿ ನಿಮ್ಮ ನೋಟ್ ಪುಸ್ತಕದಲ್ಲಿ ನಗರದ ಒಂದು ಮಾದರಿ ನಕ್ಷೆಯನ್ನು ರಚಿಸಿ. ರಸ್ತೆ/ಅಡ್ಡರಸ್ತೆಗಳನ್ನು ಏಕರೇಖೆಗಳಿಂದ ಪ್ರತಿನಿಧಿಸಿ.ನಿಮ್ಮ ಮಾದರಿಯಲ್ಲಿ ಅನೇಕ ಛೇದಿಸುವ ರಸ್ತೆಗಳಿವೆ. ಇಂತಹ ಪ್ರತಿಯೊಂದು ಜೊತೆ ಛೇದಿಸುವ ರಸ್ತೆಗಳು, ಒಂದು ಉತ್ತರ - ದಕ್ಷಿಣ ದಿಕ್ಕು ಮತ್ತು ಇನ್ನೊಂದು ಪೂರ್ವ - ಪಶ್ಚಿಮ ದಿಕ್ಕಿನಲ್ಲಿರುವ ಎರಡು ರಸ್ತೆಗಳಿಂದ ಉಂಟಾಗಿವೆ. ಪ್ರತಿಯೊಂದು ಜೊತೆ ಛೇದಿಸುವ ರಸ್ತೆಗಳನ್ನೂ ಈ ಮುಂದಿನ ಕ್ರಮದಲ್ಲಿ ಆದರಿಸಬಹುದು.ಉತ್ತರ - ದಕ್ಷಿಣ ದಿಕ್ಕಿನಲ್ಲಿರುವ 2ನೆಯ ರಸ್ತೆ ಮತ್ತು ಪೂರ್ವ - ಪಶ್ಚಿಮ ದಿಕ್ಕಿನಲ್ಲಿರುವ 5ನೆಯ ರಸ್ತೆಗಳು ಒಂದನ್ನೊಂದು ಸಂಧಿಸುವ ಸ್ಥಾನವನ್ನು ನಾವು ರಸ್ತೆ ಛೇದನ (2,5) ಎಂದು ಕರೆಯುತ್ತೇವೆ. ಈ ಪದ್ಧತಿಯನ್ನು ಉಪಯೋಗಿಸಿ.

(i) (4,3) ಎಂದು ಎಷ್ಟು ರಸ್ತೆ ಛೇದನಗಳನ್ನು ಉಲ್ಲೇಖಿಸಬಹುದು?(ii) (3,4) ಎಂದು ಎಷ್ಟು ರಸ್ತೆ ಛೇದನಗಳನ್ನು ಉಲ್ಲೇಖಿಸಬಹುದು?-ಎಂಬುದನ್ನು ಕಂಡುಹಿಡಿಯಿರಿ.

ನಗರಗಳಲ್ಲಿನ ಬಡಾವಣೆಗಳನ್ನು ಮುಖ್ಯ ರಸ್ತೆ ಮತ್ತು ಅಡ್ಡ ರಸ್ತೆಗಳಾಗಿ ವಿಭಾಗಿಸುತ್ತಾರೆ.ಅವುಗಳು ಒಂದಕ್ಕೊಂದು ಲಂಬವಾಗಿ ಇರುತ್ತವೆ. ಮನೆಗಳ ವಿಳಾಸವನ್ನು ಕೊಡುವಾಗ ಎಷ್ಟನೇ ಮುಖ್ಯರಸ್ತೆ ಮತ್ತು ಎಷ್ಟನೇ ಅಡ್ಡರಸ್ತೆ ಎಂದು ತಿಳಿಸುತ್ತಾರೆ. ಆಗ ವಿಳಾಸ ಹುಡುಕುವುದು ಸುಲಭ.

ಚಿತ್ರದಲ್ಲಿ (3,4) ಎಂದರೆ 3 ನೇ ಮುಖ್ಯರಸ್ತೆ ಮತ್ತು 4 ನೇ ಅಡ್ಡರಸ್ತೆ

ಚಿತ್ರದಲ್ಲಿ (4,3) ಎಂದರೆ 4 ನೇ ಮುಖ್ಯರಸ್ತೆ ಮತ್ತು 3 ನೇ ಅಡ್ಡರಸ್ತೆ

(3,4)ಮತ್ತು (4,3) ಗಳು ಬೇರೆ ಬೇರೆ ಮನೆಗಳ ಸ್ಥಾನಗಳನ್ನು ತಿಳಿಸುತ್ತವೆ. ಅವೆರಡೂ ಬೇರೆ ಬೇರೆ.

ಅವುಗಳ ರಸ್ತೆ ಛೇದನಗಳ ಸಂಖ್ಯೆ ಒಂದೇ ಒಂದು.

